www.ecourtsindia.com

# ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ಶೃಂಗೇರಿ

## ಸಿ.ಸಿ.ನಂಃ 140/2024

**ಫಿರ್ಯಾದುದಾರರುಃ** ಡಿ. ಸುಧಾಕರ್,
ಬಿನ್ ದೇವಣ್ಣ ಶೆಟ್ಟಿ ,
ವಯಸ್ಸು 53 ವರ್ಷ,
ವಾಸಃ ಮತ್ವಾನಿ , ಯಡದಂಟಿ ಗ್ರಾಮ,
ಹರಿಹರಪುರ ಹೋಬಳಿ, ಕೊಪ್ಪ ತಾಲ್ಲೂಕು.

ಃ**ವಿರುದ್ಧಃ**

**ಆರೋಪಿಃ** ಅಭಿಲಾಶ್ ಎ. ಎಸ್.
ಬಿನ್ ಶಾರದಾ ಸದಾನಂದ ಪೂಜಾರಿ,
ವಯಸ್ಸು 25 ವರ್ಷ,
ವಾಸಃ ಕಳಸಾಯಕನಕಟ್ಟೆ, ನಿಲುವಾಗಿಲು ಅಂಚೆ,
ಕೊಪ್ಪ ತಾಲ್ಲೂಕು.

### ಆಪಾದನೆಯ ಸಾರಾಂಶ

ನಾನು ಶ್ರೀ. ದಾಸರಿ ಕ್ರಾಂತಿ ಕಿರಣ್, ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್,ಸಿ., ಶೃಂಗೇರಿ, ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆ,

ಆರೋಪಿಯಾದ ನಿಮ್ಮ ವಿರುದ್ಧ ಫಿರ್ಯಾದುದಾರರು ದಾಖಲು ಮಾಡಿರುವ ಫಿರ್ಯಾದು ಏನೆಂದರೆ, ಆರೋಪಿಯಾದ ನೀವು ದಿ:04.07.2023 ರಂದು ಕರ್ನಾಟಕ ಬ್ಯಾಂಕ್ ಲಿ., ಕೊಪ್ಪ ಶಾಖೆಯ ಚೆಕ್ 535442 ನ್ನು ರೂ.4,00,000/−ಗಳ ಮೊತ್ತದ ಒಂದು ಚೆಕ್ಕನ್ನು ಫಿರ್ಯಾದುದಾರರಿಗೆ ಕೊಡಬೇಕಾದ ಹಣದ ಬಾಬು ನಗದೀಕರಣಕ್ಕಾಗಿ ನೀಡಿದ್ದು, ಫಿರ್ಯಾದುದಾರರು ಅದನ್ನು ಜಮಾವಣೆಗಾಗಿ ಬ್ಯಾಂಕಿನಲ್ಲಿ ಹಾಜರುಪಡಿಸಿದಾಗ ಬ್ಯಾಂಕಿನವರು "Drawers signature differs" ಎಂಬ ಹಿಂಬರಹದಿಂದ ವಾಪಸ್ಸು ಮಾಡಿರುತ್ತಾರೆ ಹಾಗೂ ಈ ಬಗ್ಗೆ ನಿಮಗೆ ವಕೀಲರ ಮೂಲಕ ನೋಟೀಸನ್ನು ಕೊಟ್ಟರೂ ಸಹಾ ಆರೋಪಿಯಾದ ನೀವು ಚೆಕ್ಕಿನಲ್ಲಿ ಒಳಗೊಂಡ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ

This is a True Copy of the Court Records Online. Authenticated @ districts.ecourtsindia.com/cnr/KACM600001862024/truecopy/order-1.pdf

ಆರೋಪಿಯಾದ ನೀವು ಫಿರ್ಯಾದುದಾರರಿಗೆ ಮೋಸ ಮಾಡಬೇಕೆನ್ನು ಉದ್ದೇಶದಿಂದ ಈ ರೀತಿಯ ಚೆಕ್ಕನ್ನು ನೀಡಿ ವರ್ಗಾವಣೀಯ ಲಿಖಿತ ಕಾಯಿದೆ ಕಲಂ 138ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

**ಪ್ರಶ್ನೆ–1** : ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?

**ಉತ್ತರಃ** : ಅರ್ಥವಾಗಿದೆ.

**ಪ್ರಶ್ನೆ–2** : ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮಗೆ ಯಾವುದಾದರೂ ಪ್ರತಿರಕ್ಷಣೆ ಇದೆಯೇ ?

**ಉತ್ತರಃ** : ವಿಚಾರಣೆಯಾಗಬೇಕು.

(ಆರೋಪಿಗೆ ಆಪಾದನೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ತಿಳಿಸಿ ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣಿಕರಿಸುತ್ತೇನೆ)

**ದಿನಾಂಕಃ**

ಸಹಿ/- **09.01.2025**
**(ಶ್ರೀ. ದಾಸರಿ ಕ್ರಾಂತಿ ಕಿರಣ್)**
**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**
**ಶೃಂಗೇರಿ.**

**ಆರೋಪಿಯ ಸಹಿಃ**

www.ecourtsindia.com

This is a True Copy of the Court Records Online. Authenticated @ districts.ecourtsindia.com/cnr/KACM600001862024/truecopy/order-1.pdf